7

# ಯೇಸು ಹೇಗೆ ಮರಣ ಹೊಂದಿದನು?

ಯೇಸುವಿನ ಮರಣವೇ ಸತ್ಯವೇದದ ಮೂಲಾಂಶವಾಗಿದೆ. ಇತಿಹಾಸದಲ್ಲಿನ ಪ್ರಮುಖ ಘಟನಾವಳಿಯೂ ಆಗಿದೆ. ಯೆಹೂದ್ಯರ ಕೋರಿಕೆಯ ಮೇರೆಗೆ, ಪೊಂತಿ ಪಿಲಾತನು ಆತನನ್ನು ಶಿಲುಬೆಗೆ ಒಪ್ಪಿಸಿದನು. ಆತನ ಮರಣದ ಕುರಿತು ಇತರೆ ಯಾವ ಅಂಶವನ್ನು ಅರಿಯಬಹುದು? ಕ್ರೂಜಿತನಾದನು ಎಂಬುದರ ಅರ್ಥವೇನು? ಇದಕ್ಕೆ ಉತ್ತರವನ್ನು ಸತ್ಯವೇದದಿಂದಲೂ ಹಾಗೂ ಇತರೆ ಮೂಲಗಳಿಂದಲೂ ಪಡೆಯಬಹುದಾಗಿದೆ.

## ಭಯಂಕರವಾದ ಯಾತನೆ

2004 ಮೆಲ್‌ಗಿಬ್ಬನ್‌ರ "ದಿ ಪ್ಯಾಶನ್ ಫಾರ್ ಕ್ರೈಸ್ಟ್" ಎಂಬ ಚಲನ ಚಿತ್ರದಲ್ಲಿ ಯೇಸುವಿನ ಚಿತ್ರ ಹಿಂಸೆಯನ್ನು ಕ್ರೂರವಾಗಿ ಚಿತ್ತರಿಸಲಾಗಿದೆ. ಅದರಲ್ಲಿನ ಘೋರ ಹಿಂಸೆಯ ಕುರಿತು ಅನೇಕ ಟೀಕೆಗಳು ಉಂಟಾಗಿವೆ. ಕ್ರಿಸ್ತನ ಕ್ರೂಜೆಯ ಬಗ್ಗೆ ಅನೇಕ ವರ್ಷಗಳ ಕಾಲ ಅಧ್ಯಯನ ಮಾಡಿರುವ ನನಗೆ, ಕ್ರೂಜೆಯ ಬಗ್ಗೆ ನಾವು ಏನನ್ನು ಅರಿತಿದ್ದೇವೆ? ಹೌದು ಯೇಸು ಅನುಭವಿಸಿದ ಮರಣದ ಬಗ್ಗೆ ಅತಿ ಅಲ್ಪವಾಗಿ ನಾವುಗಳು ಅರಿತಿದ್ದೇವೆಯಷ್ಟೆ.

ಕ್ರೂಜೆಯ ಮರಣವನ್ನು ರೋಮಾಯರು ಕಂಡುಹಿಡಿಯದೆ ಇದ್ದರೂ, ಆ ಕಾರ್ಯವನ್ನು ಅವರು ಮಾಡಿದರು (ಅದು ಘೋರ ಕೃತ್ಯ). ಮೂಲತಃ ಯುದ್ಧದಲ್ಲಿ ಸತ್ತು ಹೋದ ಸೈನಿಕರನ್ನು ಒಂದು ಮರದ ಶೂಲಕ್ಕೆ ಸಿಕ್ಕಿಸಿ, ಪ್ರಾಣಿಗಳಿಗೆ ಆಹಾರವಾಗಿ ಮಾಡಿ, ತಾವು ವೈರಿಗಳ ಮೇಲೆ ಜಯಸಾಧಿಸಿದರು ಎಂದು ತೋರಿಸುವ ಕಾರ್ಯವಾಗಿತ್ತು. ನಂತರದಲ್ಲಿ ಜೀವವುಳ್ಳವರನ್ನು ಸಹ ಈ ರೀತಿಯಾಗಿ ಕೊಲ್ಲುವ ಪದ್ಧತಿಯನ್ನು ಕೆಲವರು ಅಭ್ಯಾಸ ಮಾಡಿಕೊಂಡರು. ರೋಮಾಯರು ಈ ಪದ್ಧತಿಯನ್ನು ಮುಂದುವರಿಸಿ, ಅಪಾರಾಧಿಗಳನ್ನು ಕ್ರೂಜೆಗೆ ಮಳೆಯಿಂದ ಜಡಿದು, ಅವರು ಯಾತನೆಮಯವಾಗಿ, ನಿಧಾನವಾಗಿಯೂ ಮರಣ ಹೊಂದುವಂತೆ ಮಾಡಿದರು (ಲ್ಯಾಟಿನ್‌ನ ಕ್ರೂಸಿಸ್ ಎಂದರೆ ಯಾತನೆ).

ಕ್ರೂಜೆಯ ಮರಣದಲ್ಲಿ, ಅಘಾತ, ಸೋಂಕು, ಬೆತ್ತಲೆ, ಆಯಾಸ, ಉಸಿರು ಗಟ್ಟುವಿಕೆ ಉಂಟಾಗುತ್ತಿತ್ತು. ಕೇವಲ ಶಿಲುಬೆಗೆ ಹಾಕಿದ್ದರಿಂದ ಮರಣ ಉಂಟಾಗುತ್ತಿರಲಿಲ್ಲ. ಒಬ್ಬ ಅಪ ರಾಧಿಯನ್ನು ಶಿಲುಬೆಗೆ ಕಟ್ಟುವದರಿಂದ, ಯಾವುದೇ ಗಾಯಗಳು ಉಂಟಾಗದೆ, ಅವನಿಗೆ ಬಿದ್ದ ಏಟುಗಳ ನಿಮಿತ್ತ ಗಾಯಗಳಾಗುತ್ತಿದ್ದವು. ಮೊಳೆಗಳನ್ನು ಹೊಡೆಯುವಾಗಲು ಸಹ, ಮಣಿಕಟ್ಟಿನ ಮೂಳೆಗಳ ನಡುವೆ ಜಾಗರೂಕತೆಯಿಂದ ಮೊಳೆಗಳನ್ನು ಹೊಡೆಯುತ್ತಿದ್ದರು. ಆದ್ದರಿಂದ ಶಿಲುಬೆಗೆ ಹಾಕಲ್ಪಟ್ಟ ವ್ಯಕ್ತಿಯ ಮೂಳೆಗಳು ಅವನಿಗೆ ಆಧಾರವಾಗುತ್ತಿತ್ತು. (ಅಂಗೈಗಳಿಗೆ ಮೊಳೆಗಳನ್ನು ಹೊಡೆದರೆ ಅದು ದೇಹದ ಭಾರವನ್ನು ಹೊರಲಾರದು) ಹಾಗೂ, ಅಧಿಕ ರಕ್ತ ಸ್ರಾವವಾಗದಂತೆ ಮಾಡಿ, ಅಪರಾಧಿಯು ಅನೇಕ ದಿವಸಗಳ ಕಾಲ ನರಳಿ ಸಾಯುವಂತೆ ಮಾಡುತ್ತಿತ್ತು.

(ಸುವಾರ್ತೆಗಳ ಪ್ರಕಾರ) ಯೇಸುವಿನ ಮರಣವು ಆರು ತಾಸುಗಳಲ್ಲೇ ಉಂಟಾಯಿತು. ಇದರ ಪ್ರಕಾರ, ಹೃದಯಾಘಾತದಿಂದ ಯೇಸುವಿನ ಮರಣ ಉಂಟಾಗಿರಬಹುದು ಅಥವಾ ಯೋಹಾನ 19:34: "ಆದರೂ ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು; ಕೂಡಲೇ ರಕ್ತವೂ ನೀರೂ ಹೊರಟಿತು." ರಕ್ತದಲ್ಲಿನ ದ್ರವ ಹಾಗೂ ಘನ ಪದಾರ್ಥವು ಪ್ರತ್ಯೇಕವಾದ್ದರಿಂದ, ರಕ್ತ ನೀರೂ ಹೊರ ಬಂದಿರುತ್ತದೆ ಇದರಿಂದ ಯೇಸುವಿಗೆ

ಮರಣ ಉಂಟಾಯಿತು. ಆತನನ್ನು ಶಿಲುಬೆಗೆ ಹಾಕುವ ಮುನ್ನವೇ ಗಾಯಗೊಳಿಸಿದ್ದರಿಂದ, ಶಿಲುಬೆಯ ಮರಣವು ಶೀರ್ಘವಾಗಿ ಉಂಟಾಗಿರಬಹುದು. ಆತನಿಗೆ ಏಟು ನೀಡಲು ಬಳಸಿದ ಚಾಟಿಯಲ್ಲಿ ಕಬ್ಬಿಣದ ಮೊಳೆಗಳನ್ನು ಹಾಗೂ ಗಾಜಿನ ತುಣುಕುಗಳನ್ನು ಹೆಣೆದಿದ್ದರು, ಆದ್ದರಿಂದ ಆತನ ದೇಹವು ಗಾಯಗೊಂಡಿತ್ತು. ಚರಿತ್ರೆಯ ಬರಹಗಾರರ ಪ್ರಕಾರ, ದೇಹಕ್ಕೆ ಈ ವಿಧವಾದ ಹಿಂಸೆಯನ್ನು ನೀಡಿದ್ದರ ನಿಮಿತ್ತ, ದೇಹದ ಒಳಗಿನ ಅಂಗಾಗಗಳು ಅಪಾಯಕ್ಕೆ ಒಳಗಾಗಿ ಬೆನ್ನಿನ ಭಾಗದಿಂದ ಹೊರಗೆ ಕಾಣುವ ಸಾಧ್ಯತೆಯಿತ್ತು. ಕೆಲವು ಸಾರಿ ಚಾಟಿಯ ಏಟಿನ ನಿಮಿತ್ತವೆ ಸಾಯುವ ಸಂಭವವಿತ್ತು.

ಯೇಸುವಿನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ಕಳ್ಳರ ವಿಚಾರದಲ್ಲಿ ಅವರು ಉಸಿರುಗಟ್ಟಿ ಸತ್ತರು. ಅವರು ಮೊಣಕಾಲುಗಳನ್ನು ಭಾಗಿಸಿ, ಮರದ ಕಂಬಕ್ಕೆ ಅವರ ಪಾದಗಳನ್ನು ಕಟ್ಟಿದ್ದರು. ಈ ಸಂದರ್ಭದಲ್ಲಿ ಅಪರಾಧಿಗಳು ಪಾದಗಳನ್ನು ಒತ್ತಿ ಉಸಿರಾಡುವಾಗ, ಅವರ ಹೊಟ್ಟೆಯು ಒತ್ತಡಕ್ಕೆ ಒಳಗಾಗುತ್ತಿತ್ತು. ದೇಹದ ಪೂರ್ಣ ಬಾರವು ಕೈಗಳ ಮೇಲೆ ಬೀಳುತ್ತಿದ್ದು, ಅವರು ಪ್ರಯಾಸದಿಂದ ಉಸಿರಾಡಬೇಕಾದ್ದರಿಂದ, ಮೊಳೆಗಳಿಂದ ಜಡಿಯಲ್ಪಟ್ಟ ಅವರ ಪಾದಗಳು ವೇದನೆಗೆ ಒಳಗಾಗುತ್ತಿತ್ತು. ಯೋಹಾನ 19:31-33 ಪ್ರಕಾರ, ಯೆಹೂದ್ಯ ಅಧಿಕಾರಿಗಳು ಶಿಲುಬೆಗೆ ಹಾಕಲ್ಪಟ್ಟ ಆ ಮೂವರು ಜನರ ಕಾಲುಗಳನ್ನು ಮುರಿಯಬೇಕೆಂದು ಪಿಲಾತನಿಗೆ ಮನವಿ ಮಾಡಿದರು, ಕಾರಣವೇನೆಂದರೆ, ಸಬ್ಬತ್ತಿನಲ್ಲಿ ಶವಗಳು ಬಹಿರಂಗವಾಗಿ ನೇತಾಡ ಬಾರದಿತ್ತು. ಮೊಣಕಾಲುಗಳನ್ನು ಮುರಿಯುವ ನಿಮಿತ್ತ ಅವರಿಗೆ ಉಸಿರಾಟಕ್ಕೆ ತೊಡಕಾಗಿ, ಅವರು ಕೆಲವೇ ಕ್ಷಣಗಳಲ್ಲಿ ಮರಣಕ್ಕೆ ತುತ್ತಾಗುತ್ತಿದ್ದರು. ಯೇಸುವಿನ ಪ್ರಾಣ ಇಲ್ಲದೆ ಇದ್ದದರಿಂದ, ಸಿಪಾಯಿಗಳು ಆತನ ಕಾಲುಗಳನ್ನು ಮುರಿಯಲಿಲ್ಲ. ಆದರೆ ಆತನ ದೇಹವನ್ನು ಪರಿಕ್ಷಿಸುವ ಸಲುವಾಗಿ, ಆತನ ಪಕ್ಕೆಗೆ ತಿವಿದರು.

## ಅವಮಾನವೀಯ ಕೃತ್ಯಗಳು

ಶಿಲುಬೆಯು ಕೇವಲ ವೇದನೆಯನ್ನು ಮಾತ್ರ ಒಳಗೊಂಡಿರದೆ, ಅವಮಾನವನ್ನು ಸಹ ಒಳಗೊಂಡಿತು. ಶಿಲುಬೆಯ ಮೂಲಕ ರೋಮಾಯರು ಬಹಳಷ್ಟು ಬಹಿರಂಗ ಪ್ರಚಾರವನ್ನು ಪಡೆಯುತ್ತಿದ್ದರು. ಅದನ್ನು ಅವರು ರಸ್ತೆಗಳ ವೃತ್ತದಲ್ಲಿ, ಪಟ್ಟಣದ ಹೊರ ಭಾಗದಲ್ಲಿ, ನಿದರ್ಶನವಾಗಿ ಮಾಡುತ್ತಿದ್ದರು. ಕೆಲವು ಸ್ಥಳಗಳನ್ನು ತಿಳಿಸಿದ್ದರೂ, ಯೇಸುವಿನ ಮರಣದ ಸ್ಥಳವನ್ನು ನಿರ್ಧಿಷ್ಟವಾಗಿ ತಿಳಿಸಿರುವದಿಲ್ಲ.

ಶಿಲುಬೆಗೆ ಹಾಕಲ್ಪಟ್ಟ ಅಪರಾಧಿಯ ಕುರಿತಾಗಿ ತಲೆಬರಹವನ್ನು ಬರೆದು ಶಿಲುಬೆಯ ತುದಿಗೆ ನೇತು ಹಾಕುತ್ತಿದ್ದರು, ಇದನ್ನು ಗಮನಿಸಿದ ಜನರು, ಅವರು ಮಾಡಿದ ತಪ್ಪುಗಳನ್ನು ಮಾಡಬಾರದೆಂಬ ಎಚ್ಚರಿಕೆಯು ಅದಾಗಿತ್ತು. ಸುವಾರ್ತೆಗಳಲ್ಲಿ, “ಆತನು ಯೆಹೂದ್ಯರ ಅರಸನು” ಎಂಬ ನಾಮ ಫಲಕವನ್ನು ಹಾಕಿದ್ದರು ಎಂದು ತಿಳಿಸಲಾಗಿದೆ (ಯೋಹಾನ 19:19-22 ಅದನ್ನು ಇಬ್ರಿಯ ಪಾಲಿಸ್ತೇನಿನ ಅರಾಮಿಕ), ಲಾತೀನ್ (ರೋಮಾಯರ ರಾಷ್ಟ್ರೀಯ ಭಾಷೆ) ಹಾಗೂ ಗ್ರೀಕ್ (ಮೆಡಿಟೆರೇನಿಯನ್ನಿನ ಭಾಷೆ) ಭಾಷೆಗಳಲ್ಲಿ ಬರೆದಿದ್ದರು. ತಲೆ ಬರಹವನ್ನು ಯಾವಾಗಲೂ ಮೂರು ಭಾಷೆಗಳಲ್ಲಿ ಬರೆಯುತ್ತಿದ್ದರು ಎಂಬದು ಸಂಶಯದ ಅಂಶ. ಎಲ್ಲರೂ ಓದಿ ತಿಳಿಯಬೇಕೆಂದು ಪಿಲಾತನ ಉದ್ದೇಶವಾಗಿತ್ತು. ಯೇಸು, ನಾನೇ ಯೆಹೂದ್ಯರ ಅರಸನು ಎಂದು ಹೇಳಿದ ಹೇಳಿಕೆಯನ್ನೇ ಪಿಲಾತನು ಬರೆಯಬೇಕೆಂದು ಯೆಹೂದ್ಯರು ಬಯಸಿದ್ದರು. ಯೆಹೂದ್ಯರ ಮೇಲೆ ಬಲಹೀನವಾದ ಪ್ರತಿಕಾರವನ್ನು ತೆಗೆದುಕೊಳ್ಳುವ ಉದ್ದೇಶದಿಂದ. ಪಿಲಾತನು ನಾನು ಬರೆದದ್ದು ಬರೆದಾಯಿತು ಎಂದು ಹೇಳಿ ದನು (ಯೋಹಾನ 19:22). ಆತನು ನಿಜವಾಗಲೂ ಯೆಹೂದ್ಯರ ಅರಸನೆಂಬ ಸತ್ಯವನ್ನು ಸುವಾರ್ತಾ ಬರಹಗಾರರು ಅರಿತುಕೊಂಡಿದ್ದರು.

ಶಿಲುಬೆಯ ಮರಣ ಎಷ್ಟು ಅವಮಾನೀಯವಾಗಿತ್ತೇಂದರೆ ಅದನ್ನು ಹೀನವಾದ

ಅಪರಾಧಿಗಳಿಗಾಗಿ ಮಾತ್ರ ಬಳಸಲಾಗುತ್ತಿತ್ತೇ ವಿನಃ ರೋಮಾಯರು ತಮ್ಮವರಿಗಾಗಿ ಬಳಸಲಿಲ್ಲ (ಇತಿಹಾಸದಲ್ಲಿ ಈ ಕುರಿತು ದಾಖಲೆಗಳಿಲ್ಲ), ಆದ್ದರಿಂದ ಪೌಲನನ್ನು ಶಿಲುಬೆಗೆ ಹಾಕದೆ ಅವನ ತಲೆಯನ್ನು ಕಡಿದು ಹಾಕಿದರು.[1] "ಪೇತ್ರನು ಗಲಿಲಾಯದವನಾದ್ದರಿಂದ, ಶಿಲುಬೆಗೆ ಹಾಕಲ್ಪಟ್ಟನು" (ಯೋಹಾನ 21:18, 19). ಶಿಲುಬೆಯ ಅವಮಾನಕರವಾದ ಸಂಗತಿಯಿಂದ, ಶಿಲುಬೆಯ ಮೊದಲು ಹಾಗೂ ನಂತರದಲ್ಲಿ ಯೇಸುವಿನ ಅನುಭವವನ್ನು ಅರಿಯುತ್ತೇವೆ. ದೇವರಿಂದ ಆಯ್ಕೆಯಾದವನಿಗೆ ಈ ಶಿಕ್ಷೆ ಏಕೆ, ವಿಶೇಷವಾಗಿ ಆತನು ಅರಸನಾಗಿರಲಿಲ್ಲವೇ? (ಮತ್ತಾಯ 27:27-44; ಮಾರ್ಕ 15:16-32; ಲೂಕ 23:32-38; ಫಿಲಿಪ್ಪಿ 2:8; ಇಬ್ರಿಯ 12:2.)

ಅವಮಾನವೀಯವಾದ ಶಿಲುಬೆಯ ವಿಚಾರವನ್ನು ಪೌಲನು "ವಿಘ್ನ"[2] ಎಂದು ಕರೆದಿರುವನು (1 ಕೊರಿಂಥ 1:23; ಗಲಾತ್ಯ 5:11). "ಹಳೆಯ ಹೊರಟು ಶಿಲುಬೆ" ಎಂದು ಹಾಡುವವರಿಗೆ ಇದು ವಿಚಿತ್ರವೆನಿಸಬಹುದು. ಆದರೆ ಅದು ಬಹಳ ಅರ್ಥ ಗರ್ಭಿತವಾಗಿದೆ. ಆದರೆ ಒಬ್ಬನ ಶಿಲುಬೆಯ ಮರಣದ ನಿಮಿತ್ತವಾಗಿ ಜಯವಾಗಲೀ, ಒಳ್ಳೆಯದಾಗಲಿ ಉಂಟಾಗುವದಕ್ಕೆ ಸಾಧ್ಯವೇ? ಈ ಮರಣವನ್ನು ಹೊಂದಿದವನು ಮೆಸ್ಸೀಯನಲ್ಲ ಎಂಬುದು ಯೆಹೂದ್ಯರ ತರ್ಕವಾಗಿದೆ. ಏಕೆಂದರೆ ಧರ್ಮೋಪದೇಶಕಾಂಡ 21:23 (ಆ ಮರಣವು ಅಪಜಯದ ಸಂಕೇತ ಯೆಹೋಶುವ 8:29), ದೇವರ ಮೆಸ್ಸಿಯನು ಶಾಪದ ವ್ಯಕ್ತಿಯಾಗಿರುವದು ಅಸಾಧ್ಯ! ಶಿಲುಬೆಗೆ ಹಾಕಲ್ಪಟ್ಟು ಎದ್ದು ಬಂದ ಮೆಸ್ಸೀಯನು ಎಂದು ನಿರೂಪಿಸಲು, ಆದಿ ಸಭೆಯವರಿಗೆ ಅದು ದೈವ ಶಾಸ್ತ್ರದ ಪ್ರಶ್ನೆಯಾಯಿತು. ಪೌಲನು ಗಲಾತ್ಯ 3:13, 14ರಲ್ಲಿ ಧರ್ಮೋಪದೇಶಕಾಂಡ 21ರ ಶಾಪದ ಹೇಳಿಕೆಯನ್ನು ತಿಳಿಸಿದನು. [ಪಾಪದ ಶಾಪದಿಂದ ಯೇಸು ನಮ್ಮನ್ನು ಬಿಡುಗಡೆ ಮಾಡಿದನು ಗಲಾತ್ಯ 3:10-12], ಆತನು ನಮಗಾಗಿ ಶಾಪವಾದನು. ಯೇಸುವಿನ ಪರಿಸ್ಥಿತಿಯಲ್ಲಿ ಶಾಪಗ್ರಸ್ತನೆ ಇರಲಿಲ್ಲವೆಂದು ಪೌಲನನು ತಿಳಿಸದೆ, "ಶಿಲುಬೆ"ಯ ಮರಣವನ್ನು ಅನುಭವಿಸಿ, ಆತನು ನಮ್ಮ ಶಾಪಗಳನ್ನು ಹೊತ್ತನು ಎಂದು ತಿಳಿಸಿದನು.

## ಪ್ರಾಮುಖ್ಯತೆ ಹಾಗೂ ಅಪರಾಧ

ಪೌಲನು, ಶಿಲುಬೆಯ ಕುರಿತ ಪ್ರಬುದ್ಧತೆಯನ್ನು 1 ಕೊರಿಂಥ 1:18-25 ರಲ್ಲಿ ತಿಳಿಸಿ, "ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ." ಅವನು ಮುಂದುವರೆಸಿ, ಯೆಹೂದ್ಯರು ಮಹತ್ಕಾರ್ಯಗಳನ್ನು ಅಪೇಕ್ಷಿಸಿದರೂ (ಯೇಸುವಿನ ಅಸ್ತಿತ್ವ) ಗ್ರೀಕರು "ಜ್ಞಾನಕ್ಕಾಗಿ" ತವಕ ಪಟ್ಟರೂ (ಪಾಂಡಿತ್ಯ) ಪೌಲನು "ಕ್ರೂಜಿತನಾದ ಯೇಸುವನ್ನೇ ಪ್ರಬೋಧಿಸಿದನು." ಶಿಲುಬೆಯ ವಿಚಾರವು ಅನ್ಯರಿಗೆ ಮೂರ್ಖತನವಾದರೂ, ಶಿಲುಬೆಯ ಮಾರ್ಗವಾಗಿ, ದೇವರು ತನ್ನನ್ನು ಪ್ರಕಟಿಸಿದನು ಎಂದು ಪೌಲನು ನಿರೂಪಿಸಿದನು. ಮೊದಲ ಶತಮಾನದಂತೆ, ಅನ್ಯರಿಗೆ ಶಿಲುಬೆಯ ವಿಚಾರವು "ವಿಘ್ನವಾಗಿದೆ" ಆದರೆ ನಾವುಗಳ ಪಾಪದ ನಿವಾರಣೆಯನ್ನು ಅರಿತವರಾಗಿ, ಅದನ್ನು ನಿಷೇಧಿಸಬೇಕು.

## ಮುಕ್ತಾಯ

ರೋಮಾಯರು ನೀಡಿದ ಯೇಸುವಿನ ಶಿಲುಬೆಯ ಮರಣದ ಮಾಹಿತಿಯನ್ನು ಪೂರ್ವಿಕರಿಂದ, ಯೆಹೂದ್ಯರು ಹಾಗೂ ಅನ್ಯರಿಂದ ಸಂಕ್ಷಿಪ್ತವಾಗಿ ಅರಿತಿದ್ದೇವೆ. ಹೊಸ ಒಡಂಬಡಿಕೆಯ ಬರಹಗಾರರು, ಯೇಸುವಿನ ಮರಣದ ವೇದನೆಯ ಬಗ್ಗೆ ಆಳವಾದ ಅಧ್ಯಯನವನ್ನು ಮಾಡುವ ಪ್ರಯತ್ನವನ್ನು ಮಾಡಿರುವದಿಲ್ಲ. ಆತನನ್ನು ಶಿಲುಬೆಗೆ ಹಾಕಿದರು ಎಂಬ ಸರಳವಾದ ಹೇಳಿಕೆಯನ್ನು ಮಾತ್ರ ನೀಡಿರುವರು (ಮಾರ್ಕ 15:24; ಮತ್ತಾಯ

27:35; ಲೂಕ 23:33; ಯೋಹಾನ 19:18). ಯೇಸುವಿನ ಮರಣವನ್ನು ಘೋರವಾಗಿ ವಿವರಿಸುವದು ಕಳಂಕವೇ ಎಂದು ಪ್ರಾಚೀನ ಬರಹಗಾರರು ತಿಳಿದಿದ್ದರು, ಮತ್ತು ಅದು ಪ್ರಾಚೀನ ಪದ್ಧತಿ ಎಂದು ಅವರುಗಳು ತಿಳಿದಿದ್ದರು. ಶಿಲುಬೆಯು ಅವರಿಗೆ ಆರಾಧನೆಯ ಸಂಕೇತವಾಗಲಿಲ್ಲ ಅಥವಾ ಆಭರಣದ ಒಂದು ತುಣುಕಾಗಲಿಲ್ಲ. ಅದು ಮರಣಕ್ಕೆ ಬಳಸಿದ ಒಂದು ಸಾಧನವಷ್ಟೆ. ಅದರ ಮೇಲೆ ಪ್ರಾಣಬಿಟ್ಟವನೇ ಅವರಿಗೆ ಪ್ರಮುಖವಾದನು.

---

ಟಿಪ್ಪಣಿಗಳು

[1]Eusebius *Church History* 2.25.5. [2]This figure of speech is from the Greek word *skandalon*, which originally meant a trap, then came to mean a cause for offense. The English word "scandal" comes from this term, and the expression "the scandal of the cross" is based on Paul's comments in 1 Corinthians 1:23 and Galatians 5:11.